ದಿನಾಂಕ : 22.06.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

3. ಲೋಕಾಯುಕ್ತ ಕಚೇರಿಗೆ ಹನುಮಂತಪ್ಪ ಹಾಗೂ ಜಗದೀಶ ಎನ್ನುವ ಇಬ್ಬರು ಅಧಿಕಾರಿಗಳನ್ನು ಲೋಕಾಯುಕ್ತ ಅಧಿಕಾರಿ ಕರೆಸಿ ನನಗೆ ಪರಿಚಯ ಮಾಡಿಕೊಟ್ಟರು. ನಾನು ರೆಕಾರ್ಡು ಮಾಡಿಕೊಂಡಿದ್ದ ಸಂಭಾಷಣೆಯನ್ನು ಕಂಪ್ಯೂಟರ್ ನಲ್ಲಿ ಹಾಕಿ ಸದರಿ ಅಧಿಕಾರಿಗಳಿಗೆ ಕೇಳಿಸಿದರು. ಸದರಿ ಸಂಭಾಷಣೆಯಲ್ಲಿ ಆರೋಪಿ ಲಂಚ ಕೇಳಿದ ಬಗ್ಗೆ ಮಾತುಕತೆ ಇದ್ದಿತು. ಸದರಿ ಸಂಭಾಷಣೆಯನ್ನು ಸಿಡಿಗೆ ಪರಿವರ್ತಿಸಿ ಪ್ಯಾಕ್ ಮಾಡಿ ಇಟ್ಟುಕೊಂಡರು. (ಸೀಲಾದ ಪ್ಯಾಕೆಟ್ಟನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು). ಸದರಿ ಸಿಡಿಯನ್ನು ರುಜುವಾತಿಗೆ ಹಾಗೂ ತಕರಾರಿಗೆ ಒಳಪಟ್ಟು ನಿಪಿ-2 ಎಂದು ಗುರುತಿಸಲಾಯಿತು.

4. ಲೋಕಾಯುಕ್ತ ಅಧಿಕಾರಿಗಳು ನನಗೆ ಹಣ ತಂದಿದ್ದೀರಾ ಎಂದು ಕೇಳಿದಾಗ ನಾನು ತಂದಿದ್ದೇನೆ ಎಂದು ಹೇಳಿದೆ. ನಾನು 10000/- ರೂಗಳನ್ನು ತೆಗೆದುಕೊಂಡು ಹೋಗಿದ್ದೆ. ಸದರಿ ನೋಟುಗಳ ನಂಬರುಗಳನ್ನು ಅಧಿಕಾರಿ ಹನುಮಂತಪ್ಪ ಬರೆದುಕೊಂಡರು. ಸದರಿ ನೋಟುಗಳಿಗೆ ಪುಡಿಯನ್ನು ಜಗದೀಶ ರವರು ಸವರಿದರು. ನನ್ನ ಜೇಬನ್ನು ತಪಾಸಣೆ ಮಾಡಿ ಹನುಮಂತಪ್ಪ ನವರು ಸದರಿ ನೋಟುಗಳನ್ನು ನನ್ನ ಜೇಬಿಗೆ ಇಟ್ಟರು. ನಂತರ ಪೌಡರ್ ಅನ್ನು ಹಾಕಿದ ಔಷಧಿಯಲ್ಲಿ ಹನುಮಂತಪ್ಪ ನವರ ಕೈಗಳನ್ನು ತೊಳೆಸಿದರು. ಸದರಿ ಔಷಧಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಬಾಟಲಿಗೆ ಹಾಕಿ ಪ್ಯಾಕ್ ಮಾಡಿದರು. ಸಾಕ್ಷಿ ನೋಡಿ ಗುರುತಿಸಿದ ಬಾಟಲನ್ನು ಎಂಒ-1 ಎಂದು ಗುರುತಿಸಲಾಯಿತು. ಮೇಲ್ಕಂಡ ಪ್ರಕ್ರಿಯೆ ಬಗ್ಗೆ ಪೋಟೋ ತೆಗೆದರು ಹಾಗೂ ನನ್ನ ಸಹಿ ಪಡೆದರು. ಪ್ರಾಯೋಗಿಕ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪ್ರಾಯೋಗಿಕ ಪಂಚನಾಮೆಯನ್ನು ನಿಪಿ-3 ಎಂದೂ, ಸಾ. ಸಹಿಯನ್ನು ನಿಪಿ3-(ಎ) ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಯನ್ನು ಪೋಟೋಗಳ ಬಗೆಗಿನ ಸಿಡಿಯ ಅಲಭ್ಯತೆಯಿಂದ ಮುಂದೂಡಲಾಯಿತು)**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.